# ನೀತಿಯಿಲ್ಲದ ಧರ್ಮ

ವ್ಯಕ್ತಿ ಮೂಲತಃ ನೀತಿವಂತನೇ. ಅವನು ತನ್ನ ಬೆಳವಣಿಗೆಯ ಹಂತದಲ್ಲಿ, ತನ್ನ ಸುತ್ತಮುತ್ತಲ ಪರಿಸರದ ಪ್ರಭಾವದಿಂದ ಅನೈತಿಕ ಹೆಜ್ಜೆಗಳನ್ನಿಡಲು ಆರಂಭಿಸುತ್ತಾನೆ. ಕುವೆಂಪು ಅವರು ತಿಳಿಸುವಂತೆ ಹುಟ್ಟುತ್ತಾ ಪ್ರತಿಯೊಂದು ಶಿಶುವೂ ವಿಶ್ವಮಾನವನೇ ಆಗಿರುತ್ತದೆ. ಬೆಳವಣಿಗೆಯ ಹಂತದಲ್ಲಿ ಈ ಸಮಾಜ ಅವನನ್ನು ಅಲ್ಪಮಾನವನನ್ನಾಗಿ ಜಾತಿಮತೀಯ ಮಾನವನನ್ನಾಗಿ ಪರಿವರ್ತಿಸಿ ಬಿಡುತ್ತದೆ. ನೈತಿಕ ನಡೆಯ ವಿಷಯದಲ್ಲೂ ಹಾಗೆಯೇ. ಯಾವ ವ್ಯಕ್ತಿಗೂ ತಪ್ಪು ದಾರಿಯಲ್ಲಿ ನಡೆಯಬೇಕು, ಇತರರಿಗೆ ನೋವು ಕೊಡಬೇಕು, ಅನ್ಯಾಯ ಮಾಡಿ ಬದುಕಬೇಕು– ಅಂತ ಮೂಲತಃ ಅನ್ನಿಸುವುದಿಲ್ಲ. ಅವನಲ್ಲಿ ಸ್ವಾರ್ಥ ಮತ್ತು ಮೇಲರಿಮೆಯ ರೋಗಗಳು ಪ್ರವೇಶ ಮಾಡಿದ ಕೂಡಲೇ ಅವನ ನೀತಿಯುತ ಹೆಜ್ಜೆಗಳು ತಪ್ಪಲಾರಂಭಿಸುತ್ತವೆ, ಅಂದರೆ ಸದಾ ನೀತಿಬೋಧನೆ ಮಾಡುವ ಸಮಾಜವೇ ವಾಸ್ತವದಲ್ಲಿ ಅವನನ್ನು ಅನೈತಿಕ ನಡೆಯಲ್ಲಿ ಸಾಗಲು ಉತ್ತೇಜಿಸುತ್ತದೆ ಎಂದಾಯಿತು. ತಾನು, ತನ್ನದು ಎಂಬುದು ಮುಖ್ಯವಾದಾಗ; ತನಗೆ, ತನ್ನವರಿಗಾಗಿ ಕೂಡಿಡುವ ಪ್ರವೃತ್ತಿ ಅಧಿಕವಾದಾಗ ವ್ಯಕ್ತಿ ಅಡ್ಡದಾರಿ ಹಿಡಿಯುತ್ತಾನೆ. ಹೀಗೆ ಅಡ್ಡದಾರಿಯನ್ನು ಹಿಡಿಯುವ ವ್ಯಕ್ತಿಗಳನ್ನು ಮನೆಯ/ಊರಿನ ಹಿರಿಯರು ತಿದ್ದಬೇಕು; ಸರಿದಾರಿ ಯಾವುದೆಂದು ಅವರಿಗೆ ತಿಳಿ ಹೇಳಬೇಕು. ಮುಖ್ಯವಾಗಿ ಅವರು ನಂಬಿ ಆಚರಿಸುವ ಧರ್ಮಗಳು ಅವರನ್ನು ನೀತಿ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಬೇಕು. ಧರ್ಮವೆಂದರೆ, ಅದು ಕೇವಲ ವ್ರತ ನಿಯಮಾದಿ ಆಚರಣೆಗಳನ್ನು ಆಚರಿಸುವ ಜೀವನ ಪದ್ಧತಿಯಲ್ಲ, ನಿಜಾರ್ಥದಲ್ಲಿ ಧರ್ಮವೆಂದರೆ– ಒಂದು ಸಮುದಾಯದ ನೀತಿಯುತ ಜೀವನ ಕ್ರಮ. ಅಲ್ಲಿ ನಂಬಿಕೆ, ಶ್ರದ್ಧೆ, ಭಯ–ಭಕ್ತಿಗಳಿಗಿಂತ ಶುದ್ಧ ನಡೆಗೆ ಮತ್ತು ಚಾರಿತ್ರ್ಯಯುತ ಜೀವನ ಕ್ರಮಕ್ಕೆ ಆದ್ಯ ಬೆಲೆ ಇರಬೇಕು. ವ್ಯಕ್ತಿಯನ್ನು ನೀತಿ ಮಾರ್ಗದಲ್ಲಿ ನಡೆಸಲು ಅಸಮರ್ಥವಾದ ಮತಧರ್ಮಗಳು ಕೇವಲ ಜಿಡ್ಡುತನದ, ಡಾಂಬಿಕತನದ ಬದುಕನ್ನು ಮಾತ್ರ ಕಲಿಸುತ್ತವೆ. ಇಂಥ ಮತಧರ್ಮಗಳ ಬಗ್ಗೆ ಗಾಂಧೀಜಿಯವರಿಗೆ ಕಿಂಚಿತ್ತೂ ಗೌರವವಿರಲಿಲ್ಲ. ಆದುದರಿಂದಲೇ ಅವರು ನೀತಿಯಿಲ್ಲದ ಧರ್ಮವನ್ನು ಧರ್ಮವೆಂದು ಮಾನ್ಯ ಮಾಡಲು ನಿರಾಕರಿಸಿದರು.

ನುಡಿಗಿಂತ ನಡೆ ಶ್ರೇಷ್ಠವೆಂದು ಗಾಂಧೀಜಿ ನಡೆದು ತೋರಿದರು. ಅವರ ದೃಷ್ಟಿಯಲ್ಲಿ ನೀತಿಯೆಂಬುದು ಧರ್ಮಗಮ್ಯವಾದುದೂ ಅಲ್ಲ, ಧರ್ಮದಿಂದ ಉದಯವಾದುದೂ ಅಲ್ಲ. ನೀತಿಯುತ ನಡೆಯೊಂದೇ ವ್ಯಕ್ತಿಯ ಮೋಕ್ಷ ಕಾರಕವೆಂದು ಅವರು ನಂಬಿದ್ದರು. ನೀತಿಯೆಂಬುದು ಒಳಗಿನ ಚೈತನ್ಯದ ಕಣ್ಣರೆಯುವಿಕೆಯಿಂದ ಉದ್ಭವಗೊಂಡು ವ್ಯಕ್ತಿಯನ್ನು ನಡೆಸುತ್ತದೆ ಎಂದು ತಿಳಿದಿದ್ದರು. ಈ ದೃಷ್ಟಿಯಿಂದಲೇ 'ನಡೆ ಮತ್ತು ಗುರಿ' ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಬೇಕು. ನಿರ್ದಿಷ್ಟವಾದ ಗುರಿಯನ್ನು ಮುಟ್ಟಬೇಕಾದರೆ ಯಾವ ಯಾವುದೋ ದಾರಿಯಲ್ಲಿ ಸಾಗುವುದು ಮುಖ್ಯವಲ್ಲ. ಅಂಥ ಮಾರ್ಗಗಳಿಂದ ಸಾಧಿತವಾಗುವ ಗುರಿಗಳಿಂದ ವ್ಯಕ್ತಿ ಲೋಭಿಯೂ ಜನವಿಮುಖಿನೂ ಆಗುತ್ತಾನೆ.

ವ್ಯಕ್ತಿ ಮೂಲತಃ ನೀತಿವಂತನೇ ಆಗಿರುತ್ತಾನೆಂದು ಈ ಲಹರಿಯ ಆರಂಭದಲ್ಲಿ ಹೇಳಿದೆ. ಟೊರೆಂಟೋ ವಿ.ವಿ ಈ ಬಗ್ಗೆ ನಡೆಸಿರುವ ಸಂಶೋಧನೆಗಳು ಕೆಲ ವಾಸ್ತವಗಳನ್ನು ಹೊರಚೆಲ್ಲಿವೆ. ಬಹಳ ಜನರು ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಸಿದ್ಧರಿರುತ್ತಾರೆ. ತಾವು ಸಲ್ಲಿಸುವ ಅರ್ಜಿಗಳಲ್ಲಿ ಸುಳ್ಳು ಮಾಹಿತಿ ನೀಡುವುದಿಲ್ಲ; ತಮಗಾಗಿ ನಡೆಸಲಾಗುವ ಪರೀಕ್ಷೆಗಳಲ್ಲಿ ಪ್ರಾಮಾಣಿಕವಾಗಿಯೇ ಉತ್ತರಿಸುತ್ತಾರೆ. ಇದೊಂದು ಸರ್ವೇ ಸಾಮಾನ್ಯ ಸತ್ಯ. ಎಂಥವನೂ ಕೆಟ್ಟವನಾಗಲು ಮತ್ತು ಕೆಟ್ಟ ದಾರಿಯಲ್ಲಿ ಹೆಜ್ಜೆಯಿಡಲು ಇಷ್ಟಪಡುವುದಿಲ್ಲ. ಈ ನಡೆ ಎಲ್ಲಿಯವರೆಗೆ? ಅವನಲ್ಲಿ ಸ್ವಾರ್ಥ ಇಣುಕುವವರೆಗೆ! ವೈಯಕ್ತಿಕ ಅನುಕೂಲಕ್ಕೆ ತೊಂದರೆಯಾಗುತ್ತದೆ ಎಂದು ತಿಳಿಯುತ್ತಿದ್ದಂತೆಯೇ ಸಹಜವಾಗಿಯೆಂಬಂತೆ ಸುಳ್ಳು ಹೇಳಲು ಆರಂಭಿಸುತ್ತಾನೆ; ಅಡ್ಡ ದಾರಿಯಲ್ಲಿ ಸಾಗಲು ಯತ್ನಿಸುತ್ತಾನೆಂಬುದು ಸಂಶೋಧನೆಗಳಿಂದ ಸಾಬೀತಾಗಿದೆ. ಅನೈತಿಕ ನಡೆಗೆ ಮತ್ತೊಂದು ಮುಖ್ಯ ಕಾರಣ– ಮೈಗಳ್ಳತನ ಎಂಬುವುದೂ ಬೆಳಕಿಗೆ ಬಂದಿದೆ. ತನ್ನ ಜೀವನದಲ್ಲಿ ಹೆಚ್ಚು ದುಡಿಮೆಯನ್ನು ತಪ್ಪಿಸಿಕೊಳ್ಳಲು ವ್ಯಕ್ತಿ ಅನೈತಿಕ ನಡೆಯನ್ನು ಆಯ್ದುಕೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ.

ಈ ಅಧ್ಯಯನಗಳು ನಮಗೆ ನೈತಿಕ ನಡೆಗಳು ವ್ಯಕ್ತಿಯ ಅಂತಃಸಾಕ್ಷಿಯನ್ನು ಅವಲಂಬಿಸಿರುತ್ತವೆಯೆಂಬ ಸತ್ಯವನ್ನು ಮನದಟ್ಟು ಮಾಡಿಕೊಡುತ್ತವೆ. ಇದೊಂದು ಬಗೆಯ ಅನುಕೂಲಸಿಂಧು ಪ್ರಜ್ಞೆ. ಯಾರಿಗೆ ವಿವೇಕ, ವಿವೇಚನೆ ಮತ್ತು ಸೂಕ್ಷ್ಮ ಸಂವೇದನಾಶೀಲ ಮನಸ್ಥಿತಿಗಳು ಅಂತಃಸಾಕ್ಷಿಯ ಮೇರೆಗೆ ನಡೆಯುತ್ತಿರುತ್ತವೆಯೋ ಅಂಥವರು ಎಂದೂ ಹಾದಿ ತಪ್ಪುವುದಿಲ್ಲ. ಅವರು ಧೀಮಂತರಾಗಿರುತ್ತಾರೆ; ವೈಯಕ್ತಿಕ ಲಾಲಸೆಗಳನ್ನು ಗೆದ್ದ ಮಹಾತ್ಮರಾಗುತ್ತಾರೆ. ಅವರಿಗೆ 'ವೈಯಕ್ತಿಕ'ವೆಂಬುದು ಇರುವುದಿಲ್ಲ. ಸ್ವಾರ್ಥದ ವಾಸನೆ ಅಂಟಿರುವುದಿಲ್ಲ. ಅವರು 'ಕುಟುಂಬ'ವನ್ನು ಮೀರಿದ ವಿಶ್ವ ಕುಟುಂಬಿಗಳಾಗುತ್ತಾರೆ. ಅವರ ಜೀವನದ ನಡೆಗಳನ್ನು ಅವಲೋಕಿಸಿದರೆ ಅಲ್ಲಿ ಬಂಧು ಬಾಂಧವರೆಂಬ ಸ್ವಾರ್ಥದ ಸೋಂಕೇ ಇಲ್ಲ! ಇಡೀ ಸಮುದಾಯದ ಹಿತವನ್ನು ಕಾಪಾಡುವ ಆಶಯವನ್ನು ತಮ್ಮ ಜೀವಿತದ ಗುರಿಯನ್ನಾಗಿಸಿಕೊಂಡರು.

ಅಂದರೆ ಧರ್ಮ ವ್ಯಕ್ತಿಯ ನಡೆಯನ್ನು ತಿದ್ದುವ ಕೆಲಸವನ್ನು ಮಾಡಿರುವುದು ಅಪರೂಪವೆಂದು ತಿಳಿಯಬಹುದು. ಅಪ್ಪಿತಪ್ಪಿ ಧಾರ್ಮಿಕ ಕ್ಷೇತ್ರದಲ್ಲಿ ಅಂಥ ಶುದ್ಧ ನೀತಿಯುತ ನಡೆಯ ಮಹಾತ್ಮರಿದ್ದುದೇ ಆದಲ್ಲಿ, ಅದು ಅವರ ವೈಯಕ್ತಿಕ ಮನೋನೆಲೆಯ ಸತ್ತ್ವದ ಮೂಲಕ ಸಾಧಿಸಿದ ಸಾಧನೆಯೆಂದೇ ಭಾವಿಸಬೇಕು.

■ ಶಿಕಾಕು

---

# ಮಾತೇ ಮುತ್ತು

★ ಬಿರುಗಾಳಿ ಮರಗಳನ್ನು ಉರುಳಿಸಿದರೂ; ಮೃದುವಾದ, ತಲೆಬಾಗಿದ ಎಳೆಯ ಹುಲ್ಲನ್ನು ಕಿತ್ತುಹಾಕುವುದಿಲ್ಲ. ದೊಡ್ಡವರು ಶೌರ್ಯವನ್ನು ದೊಡ್ಡವರ ಬಗೆಗೇ ತೋರಿಸುತ್ತಾರೆ.

–ಹಿತೋಪದೇಶ

★ ಮೊಟ್ಟೆ ಹೊರಗಡೆಯಿಂದ ಒಡೆದರೆ ಅದರ ಕಥೆ ಮುಗಿಯಿತು. ಒಳಗಡೆಯಿಂದ ಸ್ಫೋಟವಾದರೆ ಜೀವನ ಆರಂಭವಾಗುತ್ತದೆ! ದೊಡ್ಡ ಸಂಗತಿಗಳೂ ಹಾಗೆಯೇ. ಆದ್ದರಿಂದ ನಿನ್ನ ಬಗ್ಗೆ ನಿನಗೆ ವಿಶ್ವಾಸವಿರಲಿ.

–ಇಂಗ್ಲಿಷ್ ಗಾದೆ

★ ಶರೀರವೇ ನಮ್ಮ ತೋಟ; ಮನಸ್ಸೇ ತೋಟಗಾರ.

–ಶೇಕ್ಸ್‌ಪಿಯರ್

★ ಮನುಷ್ಯರು ಕ್ರೂರಿಗಳು, ಆದರೆ ಮನುಷ್ಯ ದಯಾಳು.

–ರವೀಂದ್ರನಾಥ ಟ್ಯಾಗೋರ್

★ ಅಜ್ಞಾನದ ಆವರಣವನ್ನು ತೆಗೆದು ಹಾಕಿದಾಗ ತಮ್ಮತನವನ್ನು ಅರ್ಥೈಸಿಕೊಳ್ಳಲು ಸಮರ್ಥರಾಗುತ್ತಾರೆ.

–ವೀರೇಂದ್ರ ಹೆಗ್ಗಡೆ

★ ನನಗೆ ಸಂತೋಷ ಬೇಕು. ಅದಕ್ಕಾಗಿ ಕಾಯೋಣ ಎಂದುಕೊಂಡರೆ ಕೊನೆಯವರೆಗೂ ಕಾಯುತ್ತಲೇ ಇರುತ್ತೇವೆ. ಆದರೆ ನಾವು ಸಂತಸವಾಗಿದ್ದೇವೆ ಎಂದುಕೊಂಡರೆ ಎಂದಿಗೂ ಆನಂದವೇ ಇರುತ್ತದೆ. ಅದೇ ಸೌಂದರ್ಯ.

–ಅನುಭವಾಮೃತ

★ ಊಟ ಮಾಡಿದ್ದು ಹೊಟ್ಟೆಗೆ ಹೋಗಬೇಕಾದರೆ ಬಾಯಿಯೇ ಸರಿಯಾದ ಮಾರ್ಗ. ತಾಯಿ ನುಡಿಯೂ ಹಾಗೆಯೇ. ಅದು ಜನರ ಬಾಯಿ.

–ಎ.ಆರ್.ಕೃಷ್ಣಶಾಸ್ತ್ರಿ

★ ಹೆಚ್ಚು ಮಾತನಾಡುವುದು ಒಳಿತಲ್ಲ; ಹೆಚ್ಚು ಸುಮ್ಮನಿರುವುದೂ ಒಳಿತಲ್ಲ.

–ಕಬೀರ

★ ಮಂತ್ರಿಗಳು ಸುಸಂಸ್ಕೃತವಾದ, ಕಲಾ ಕಾಳಜಿಯುಳ್ಳ, ಕಲಿಯುವುದರಲ್ಲಿ ಆಸಕ್ತಿಯುಳ್ಳ ಜೀವನವನ್ನು ಸಾಗಿಸಬೇಕು. ಇವರ ಜೀವನ ಇನ್ನಿತರರಿಗೆ ಮಾದರಿಯಾಗಬೇಕು.

–ಬಿ.ಆರ್.ಅಂಬೇಡ್ಕರ್

★ ಯೋಜನೆ ಹಾಕಿಕೊಂಡು ನಾನು ವರ್ಣಚಿತ್ರ ರಚಿಸುವುದಿಲ್ಲ. ನಾನು ಆರಂಭಿಸುತ್ತೇನೆ. ನಂತರ ಚಿತ್ರ ಬಿಡಿಸುವ ಪ್ರಕ್ರಿಯೆಯೇ ನನ್ನನ್ನು ನಡೆಸುತ್ತದೆ.

–ಎಸ್.ಜಿ.ವಾಸುದೇವ

★ ಮನುಷ್ಯ ಅಮರ– ಏಕೆಂದರೆ ಇತರ ಪ್ರಾಣಿಗಳಲ್ಲಿಲ್ಲದ ಆತ್ಮ, ಕನಿಕರ, ಸ್ವಾರ್ಥ, ತ್ಯಾಗ, ತಾಳ್ಮೆ ಅವನಲ್ಲಿದೆ.

–ವಿಲಿಯಂ ಫಾಕ್ನರ್

★ ಮನುಷ್ಯನನ್ನು ನಾಶ ಮಾಡಬಹುದು; ಆದರೆ ಅವನನ್ನು ಸೋಲಿಸಲಾಗದು.

–ಅರ್ನೆಸ್ಟ್ ಹೆಮಿಂಗ್ ವೇ